■ ಹನಿ

# ಟಾಮ್ 'ಮಿಶನ್..'

ಕಳೆದ ವಾರವಿಡೀ ಬಾಲಿವುಡ್‌ನಲ್ಲಿ ಹಾಲಿವುಡ್ ಸದ್ದು. ಹಾಲಿವುಡ್‌ನ ಸುಂದರಾಂಗ ಶೂರ ಟಾಮ್ ಕ್ರೂಸ್ ಮುಂಬೈ, ದೆಹಲಿ ಎಂದೆಲ್ಲಾ ಸುತ್ತಾಡಿ ಬಾಲಿವುಡ್‌ನ ನಟ– ನಟಿಯರನ್ನು ಮಾತ್ರವಲ್ಲ ಸಹಸ್ರಾರು ಅಭಿಮಾನಿಗಳನ್ನೂ ಮಂತ್ರಮುಗ್ಧಗೊಳಿಸಿ ಹೊರಟುಹೋದ. ಆತ ಭಾರತಕ್ಕೆ ಬಂದದ್ದು ಈ ಡಿಸೆಂಬರ್‌ನಲ್ಲಿ ಬಿಡುಗಡೆಯಾಗಲಿರುವ ತನ್ನ ಹೊಸ ಚಿತ್ರ 'ಮಿಶನ್ ಇಂಪಾಸಿಬಲ್–4' ಚಿತ್ರದ ಪ್ರಚಾರಕ್ಕಾಗಿ. ಮುಂಬೈಯಲ್ಲಿ ಆತ ಏರ್ಪಡಿಸಿದ ರಾತ್ರಿಯ ಪಾರ್ಟಿಗೆ ಬಾಲಿವುಡ್‌ನ ಖಾನ್–ದಾನ್ ತಾರೆಯರೆಲ್ಲ ಮುಗಿಬಿದ್ದಿದ್ದರು. ಟಾಮ್ ಜತೆ ಫೋಟೊ ತೆಗೆಸಿಕೊಳ್ಳುವುದಕ್ಕೆ ಬಾಲಿವುಡ್ ತಾರೆಯರಲ್ಲೇ ಪೈಪೋಟಿ ನಡೆಯಿತು! ಗೆಳೆಯ ಅನಿಲ್ ಕಪೂರ್ ಜತೆ ಆಗ್ರಾದ ತಾಜ್‌ಮಹಲ್‌ಗೆ ಭೇಟಿ ನೀಡಿದ ಟಾಮ್, ಅಲ್ಲಿ ಭಾವುಕನಾಗಿದ್ದ. 'ಎಷ್ಟೊಂದು ತಡ ಮಾಡಿ ಇಲ್ಲಿಗೆ ಬಂದೆ! ಇನ್ನೊಮ್ಮೆ ನನ್ನ ಪತ್ನಿಯ ಜತೆ ಸೇರಿ ಬರಬೇಕು. ಇದೊಂದು ಅದ್ಭುತ ಸ್ಮಾರಕ' ಎಂದು ಟಾಮ್ ಹೇಳಿದ್ದು ಪತ್ರಿಕೆಗಳಲ್ಲಿ ದೊಡ್ಡ ಸುದ್ದಿ.

ಸಾಹಸದ ಚಿತ್ರಗಳಲ್ಲಿ ಟಾಮ್ ಕ್ರೂಸ್‌ನನ್ನು ಬಿಟ್ಟರೆ ಈಗ ಬೇರೆ ನಟರಿಲ್ಲ ಎನ್ನುವಷ್ಟು ಖ್ಯಾತಿ ಟಾಮ್‌ಗೆ ಬಂದಿದೆ. ಅದರಲ್ಲೂ 'ಮಿಶನ್ ಇಂಪಾಸಿಬಲ್'ನ ಮೊದಲ ಮೂರೂ ಪಾರ್ಟ್‌ಗಳು ವಿಶ್ವಾದ್ಯಂತ ಬಿಲಿಯಗಟ್ಟಳೆ ಡಾಲರ್ ಹಣ ದುಡಿದಿವೆ. ಈಗ ನಾಲ್ಕನೇ ಪಾರ್ಟ್ ನೋಡಲು ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ.

ಥಾಮಸ್ ಕ್ರೂಸ್ ಮಾಪೋಥರ್ (ಬರ್ತ್‌ಡೇ 3-7-1962) ಎನ್ನುವ ಈತನ ಒರಿಜಿನಲ್ ಹೆಸರನ್ನು ಹೇಳಿದರೆ ಈಗ ಯಾರಿಗೂ ಗೊತ್ತಾಗಲಿಕ್ಕಿಲ್ಲ. 83ರಲ್ಲಿ 'ದಿ ಔಟ್‌ಸೈಡರ್ಸ್' ಬಿಡುಗಡೆಯಾದಾಗ ಈತ ಅದರಲ್ಲಿ ಹೀರೊ ಅಲ್ಲ. ಆದರೆ ಅದರ ಬೆನ್ನಲ್ಲೆ 'ರಿಸ್ಕೀ ಬಿಸಿನೆಸ್' ಸಿನಿಮಾ ಬಿಡುಗಡೆಯಾಗಿ ಈತನನ್ನು ಹೀರೊ ಮಾಡಿತು. ಆ ಬಳಿಕ ಟಾಪ್ ಗನ್ ಬಂತು. ಅಷ್ಟರಲ್ಲಿ 'ಮಿಶನ್ ಇಂಪಾಸಿಬಲ್' ಬಿಡುಗಡೆಯಾಗಿ ಈತನನ್ನು ಸೂಪರ್‌ಸ್ಟಾರ್ ಪಟ್ಟಕ್ಕೇರಿಸಿತು. 90ರಿಂದ 2000ದವರೆಗೂ ಈತ ಮಿಶನ್ ಇಂಪಾಸಿಬಲ್ ನಟನೇ! ಈತನ ಅತ್ಯುತ್ತಮ ನಟನೆಯ ಪಟ್ಟಿಯಲ್ಲಿ ರೇನ್‌ಮ್ಯಾನ್, ಡೇಸ್ ಆಫ್ ಥಂಡರ್, ದಿ ಲಾಸ್ಟ್ ಸಮುರೈಗಳನ್ನು ಹೆಸರಿಸಬಹುದಾದರೂ, ಎಲ್ಲರ ನೆನಪಿನಲ್ಲಿ ಇರುವುದು ಮಿಶನ್..! ಮಾತ್ರ. ಮೂರು ಸಲ ಅಕಾಡೆಮಿ ಪ್ರಶಸ್ತಿ ಗೆದ್ದು ಒಮ್ಮೆ ಗೋಲ್ಡನ್ ಗ್ಲೋಬ್ ಕೂಡಾ ಗೆದ್ದಿರುವ ಟಾಮ್, 50ರ ಅಂಚಿನಲ್ಲೂ ಸುರ ಸುಂದರಾಂಗನಂತೆ ಮಿಂಚುತ್ತಿದ್ದಾನೆ. ಭಾರತದ ಆತನ ಮೊದಲ ಭೇಟಿಯಂತೂ ಅಭಿಮಾನಿಗಳ ಸಂಖ್ಯೆಯನ್ನು ದುಪ್ಪಟ್ಟುಗೊಳಿಸಿದೆ!





# ಹಣ ಗಳಿಕೆಯ ನಟಿ

ಹಾಲಿವುಡ್‌ನಲ್ಲಿ ಅತ್ಯಂತ ಹೆಚ್ಚು ಲಾಭ ತಂದುಕೊಡುವ ನಟಿ ಯಾರು.. ಎಂಬ ಪ್ರಶ್ನೆಗೆ ಈ ಸಲದ ಉತ್ತರ ಕಿರ್‌ಸ್ಟೀನ್ ಸ್ಟೆವಾರ್ಟ್. ಈಕೆಯೇನೂ ಹಾಲಿವುಡ್‌ನ ಅತ್ಯಂತ ಪ್ರತಿಭಾವಂತ ನಟಿಯೇನಲ್ಲ. ಆದರೆ ಭೂತದ ಪಾತ್ರಗಳಿಂದಲೇ ಖ್ಯಾತಿ ಪಡೆದವಳೀಕೆ. ಟ್ವೈಲೈಟ್ ಸಾಗಾ..ದ ಈ ಹೀರೋಯಿನ್‌ಗೆ ನಿರ್ಮಾಪಕ ನೀಡಿದ ಪ್ರತಿಯೊಂದು ಡಾಲರ್‌ಗೆ 55.83 ಡಾಲರ್ ಹಣ ವಾಪಸ್ ಬಂದಿದೆಯಂತೆ! ಈ ಅಮೆರಿಕನ್ ನಟಿ (ಬರ್ತ್‌ಡೇ 9-4-1990) ದಿ ಟ್ವೈಲೈಟ್ ಸಾಗಾದಲ್ಲಿ ಮಾಡಿದ ಬೆಲ್ಲಾ ಸ್ವಾನ್ ಪಾತ್ರ ಈಗ ಮನೆಮಾತಾಗಿದೆ.

ತಂದೆ ಟೀವಿ ನಿರ್ಮಾಪಕ, ತಾಯಿ ಚಿತ್ರಕಥೆಯ ಮೇಲ್ವಿಚಾರಕಿ. ಇಬ್ಬರೂ ಹಿನ್ನೆಲೆಯವರಾದ್ದರಿಂದ ಈಕೆಯೂ ನಿರ್ದೇಶಕಿ, ಚಿತ್ರ ಕಥೆಗಾರ್ತಿ ಆಗಬೇಕೆಂದು ನಿರ್ಧರಿಸಿದ್ದಳಂತೆ. ಆದರೆ ಚಿಕ್ಕಂದಿನಲ್ಲಿ ಶಾಲೆಯಲ್ಲಿ ಈಕೆಯ ನಟನೆ ನೋಡಿದ ನಿರ್ಮಾಪಕನೊಬ್ಬ ಬಾಲ ನಟಿ ಮಾಡಿದ. ಕಲಿತದ್ದು 7ನೇ ತರಗತಿ ಮಾತ್ರ. ಆಮೇಲೆ ಅಂಚೆಯಲ್ಲಿ ಹೈಸ್ಕೂಲ್ ಮುಗಿಸಿದ್ದು. ಆದರೆ ಪಾತ್ರಗಳ ಒಳಹೊಕ್ಕರೆ ಈಕೆಯದ್ದು ಪರಕಾಯ ಪ್ರವೇಶವೇ. ಪ್ಯಾನಿಕ್ ರೂಮ್, ಝತೂರಾ, ಇನ್ ದಿ ಲ್ಯಾಂಡ್‌ಆಫ್ ವುಮೆನ್, ದಿ ಮೆಸೆಂಜರ್ಸ್, ಅಡ್ವೆಂಚರ್ ಲ್ಯಾಂಡ್, ಕಳೆದ ವರ್ಷ ತೆರೆ ಕಂಡ ದಿ ರನ್ ಅವೇಸ್– ಹೀಗೆ ಈಕೆ ನಟಿಸಿದ ಎಲ್ಲ ಚಿತ್ರಗಳೂ ಸಖತ್ ಲಾಭ ತಂದು ಕೊಟ್ಟಿವೆ. ಹಣ ಮಾಡಬೇಕೆಂದೇ ಹೊರಟಿರುವ ನಿರ್ಮಾಪಕರಿಗೆ ಈಗ ಈಕೆ ಫೇವರೆಟ್ ನಟಿ. ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65